ದಕ್ಷಿಣ ಕನ್ನಡ

31 ದಕ್ಷಿಣ ಕನ್ನಡ ಜಿಲ್ಲೆ ಕಲ್ಲಗುಡಿ ಪೊಲೀಸ್ ಹೊರಠಾಣೆಯನ್ನು ಖಾಯಂಗೊಳಿಸುವ ಬಗ್ಗೆ

32 ದಕ್ಷಿಣ ಕನ್ನಡ ಜಿಲ್ಲೆ ಕಲ್ಲಡ್ಕದಲ್ಲಿ ಪೊಲೀಸ್ ಹೊರಠಾಣೆ

33 ಬಜ್ಪೆ ವಿಮಾನ ನಿಲ್ದಾಣ ಪೊಲೀಸ್ ಹೊರಠಾಣೆ

ಚಿಕ್ಕಮಗಳೂರು

34 ಚಿಕ್ಕಮಂಗಳೂರು ಜಿಲ್ಲೆಯ ಕೆಮ್ಮಣ್ಣುಗುಂಡಿ ಗಿರಿಧಾಮದಲ್ಲಿ ಪೊಲೀಸ್ ಹೊರಠಾಣೆ

ತುಮಕೂರು

35 ತುಮಕೂರು ಜಿಲ್ಲೆ ಎಡೆಯೂರು ಸಿದ್ಧಲಿಂಗೇಶ್ವರ ಸ್ವಾಮಿ ಕ್ಷೇತ್ರದಲ್ಲಿ ಪೊಲೀಸ್ ಹೊರಠಾಣೆ

ಸಮುದ್ರ ಕೊರೆತದಿಂದಾದ ಹಾನಿ

293 (827) ಶ್ರೀ ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರತಿ ವರ್ಷವು ರಾಜ್ಯದಲ್ಲಿ ಕರಾವಳಿ ಜಿಲ್ಲೆಗಳಲ್ಲಿ ಮಳೆಗಾಲದಲ್ಲಿ ಸಮುದ್ರ ಕೊರೆತದಿಂದಾಗಿ ಅಪಾರ ಆಸ್ತಿಪಾಸ್ತಿ ಬೆಳೆ, ಜನ-ಜಾನುವಾರು ಹಾನಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹೌದಾದಲ್ಲಿ, 2006-07ನೇ ಸಾಲಿನಲ್ಲಿ ಆದ ಹಾನಿಯ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು (ಪರಿಹಾರ ಕಾಮಗಾರಿಗಳ ಹಾಗೂ ನೀಡಿರುವ ಪರಿಹಾರದ ವಿವರಗಳನ್ನು ವಿಧಾನ ಸಭಾ ಕ್ಷೇತ್ರವಾರು ವಿವರ ನೀಡುವುದು)

ಇ) ಪ್ರತಿ ವರ್ಷವು ಸಮುದ್ರ ಕೊರೆತವುಂಟಾಗುವುದರಿಂದ ಶಾಶ್ವತ ತಡೆಗೋಡೆ ನಿರ್ಮಾಣದ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ?

ಈ) ಹೌದಾದಲ್ಲಿ, ಶಾಶ್ವತ ತಡೆಗೋಡೆ ನಿರ್ಮಾಣಕ್ಕೆ ಮೀಸಲಿಟ್ಟ ಅನುದಾನವೆಷ್ಟು?

ಉ) ಬ್ರಹ್ಮಾವರ ಕ್ಷೇತ್ರದಲ್ಲಿ ಶಾಶ್ವತ ತಡೆಗೋಡೆ ನಿರ್ಮಿಸಲು ಗುರುತಿಸಿರುವ ಜಾಗಗಳ ವಿವರವನ್ನು ನೀಡುವುದು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಹೌದು.

ಆ) ದಿನಾಂಕ 28.5.2006 ರಿಂದ 30.6.2006ರ ವರೆಗೆ ರಾಜ್ಯದ ಕರಾವಳಿಯ ವಿವಿಧ ಪ್ರದೇಶಗಳಲ್ಲಿ ಈ ಕೆಳಕಂಡಂತೆ ತೀವ್ರ ಸಮುದ್ರ ಕೊರೆತ ಸಂಭವಿಸಿರುತ್ತದೆ.

ದಕ್ಷಿಣ ಕನ್ನಡ ಜಿಲ್ಲೆ – 1963 ಮೀ.

ಉಡುಪಿ ಜಿಲ್ಲೆ – 2867 ಮೀ.

ಉತ್ತರ ಕನ್ನಡ ಜಿಲ್ಲೆ – 1176 ಮೀ.

ಅಗತ್ಯತೆಗೆ ಅನುಗುಣವಾಗಿ ವಿವಿಧ ಪ್ರದೇಶಗಳಲ್ಲಿ ತುರ್ತು ಕಾಮಗಾರಿ ಕೈಗೊಳ್ಳಲು ಪ್ರಾಕೃತಿಕ ವಿಕೋಪ ಪರಿಹಾರ ನಿಧಿಯಡಿಯಲ್ಲಿ ಈ ಕೆಳಕಂಡಂತೆ ಅನುದಾನವನ್ನು ನೀಡಲಾಗಿದೆ.

1) ಕಾಪು ವಿಧಾನ ಸಭಾ ಕ್ಷೇತ್ರ 32.00 ಲಕ್ಷ

2) ಬ್ರಹ್ಮಾವರ ವಿಧಾನ ಸಭಾಕ್ಷೇತ್ರ 28.00 ಲಕ್ಷ

3) ಉಡುಪಿ ವಿಧಾನ ಸಭಾಕ್ಷೇತ್ರ 15.00 ಲಕ್ಷ

2006ರ ಮುಂಗಾರು ಮಳೆಯಿಂದ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿನ ಉಳ್ಳಾಲ ವಿಧಾನ ಸಭಾಕ್ಷೇತ್ರದ ಕೋಟೆಪುರ ಕೋಡಿ, ಮೋಗವೀರ ಪಟ್ಟ ಮತ್ತು ಮುಕ್ಕಚ್ಚೇರಿ ಪ್ರದೇಶದಲ್ಲಿ ಹಾಗೂ ಸುರತ್ಕಲ್ ವಿಧಾನ ಸಭಾಕ್ಷೇತ್ರದ ಹೊಸಬೆಟ್ಟು, ಮಿತ್ರ ಪಟ್ಣ ಬಾವಾ ಫಿಶರೀಸ್ ಹಾಗೂ ಸಸಿಹಿತ್ಲು ಪ್ರದೇಶದಲ್ಲಿ ಕಡಲ ಕೊರೆತದಿಂದ ಕಡಲ ತೀರ ಹಾಗೂ ಮನೆಗಳಿಗೆ ಹಾನಿಯಾಗಿರುತ್ತದೆ. ಉಳ್ಳಾಲ ವಿಧಾನ ಸಭಾಕ್ಷೇತ್ರದಲ್ಲಿ ಮಾತ್ರ ಸಮುದ್ರ ಕೊರೆತದಿಂದ 107 ಮನೆಗಳಿಗೆ ಹಾನಿ ಉಂಟಾಗಿದ್ದು, ರೂ. 2.61 ಲಕ್ಷ ಪರಿಹಾರಧನ ಪಾವತಿಸಲಾಗಿದೆ.

ಇ) ಹೌದು.

ರಾಜ್ಯದ ಕರಾವಳಿ ತೀರದ ವಿವಿಧ ಪ್ರದೇಶಗಳಲ್ಲಿ ಸುಮಾರು 49.875 ಕಿ.ಮೀ. ಉದ್ದಕ್ಕೆ ತೀರ ಸಂರಕ್ಷಣೆ ಯೋಜನೆಯಡಿ ಶಾಶ್ವತ ತಡೆಗೋಡೆ ನಿರ್ಮಿಸುವ ಪ್ರಸ್ತಾವನೆಯು ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. ದಕ್ಷಿಣ ಕನ್ನಡದ ಉಲ್ಲಾಳದಲ್ಲಿ ರೂ.45.00 ಕೋಟಿ ಅಂದಾಜು ವೆಚ್ಚದಲ್ಲಿ 3 "ಟಿ ಗ್ರಾಯಿನ್ಸ್" ನಿರ್ಮಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಈ) 2006–07ನೇ ಸಾಲಿನ ಅವಧಿಗೆ ಸಮುದ್ರ ಕೊರೆತ ಶಾಶ್ವತ ಕಾಮಗಾರಿಗಳಿಗಾಗಿ ರೂ. 400.74 ಲಕ್ಷ ಅನುದಾನ ಒದಗಿಸಲಾಗಿರುತ್ತದೆ.

ಉ) ರಾಷ್ಟ್ರೀಯ ಸಂರಕ್ಷಣೆ ಯೋಜನೆಯಡಿ (National Costal Protection Project) ಯಲ್ಲಿ ಮತ್ತು ಇತರೆ ಯೋಜನೆಗಳಡಿ ಬ್ರಹ್ಮಾವರ ವಿಧಾನ ಸಭಾಕ್ಷೇತ್ರದಲ್ಲಿ ಈ ಕೆಳಕಂಡ ಸ್ಥಳಗಳಲ್ಲಿ ಶಾಶ್ವತ ತಡೆಗೋಡೆ ನಿರ್ಮಿಸಲು ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಹೊಡೆ ಕೆಮ್ಮಣ್ಣು – 0.945 ಕಿ.ಮೀ.

ಕೋಡಿ ಬೇಂಗ್ರೆ –0.150 ಕಿ.ಮೀ.

ಹೊಸಬೇಂಗ್ರೆ – 0.800 ಕಿ.ಮೀ.

ಕೋಡಿ ಕನ್ಯಾನ – 0.850 ಕಿ.ಮೀ.

ಪಾರುಪಳ್ಳಿ ಪಡುಕೆರೆ – 0.700 ಕಿ.ಮೀ.

ಕೋಟಿತಟ್ಟು – 1.270 ಕಿ.ಮೀ.

ಮಣೂರು ಪಡುಕೆರೆ – 0.850 ಕಿ.ಮೀ.

ಈ ಮೇಲಿನ ಕಾಮಗಾರಿಗಳಲ್ಲದೆ ಹೊಡೆಯಲ್ಲಿ 34.00 ಮೀ. ಮತ್ತು ಪಡುತೋನ್ಸೆ, ಪೆರ್ಲಕಡಿಯಲ್ಲಿ 85.00 ಮೀ. ಉದ್ದಕ್ಕೆ ಶಾಶ್ವತ ತಡೆಗೋಡೆಯನ್ನು ನಿರ್ಮಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಅನುಕಂಪದ ಆಧಾರದ ಮೇಲಿನ ನೇಮಕಾತಿ

294 (1687) ಶ್ರೀ ದಿನೇಶ್ ಗುಂಡೂರಾವ್ (ಗಾಂಧಿನಗರ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರ ಪಾಲಿಕೆಯ ಆರೋಗ್ಯ ವಿಭಾಗದಲ್ಲಿ 2000 ನೇ ಇಸವಿಯಿಂದ 2003ರವರೆಗೆ ನಿಧನ ಹೊಂದಿರುವ ಪೌರಕಾರ್ಮಿಕರ ಸಂಖ್ಯೆ ಎಷ್ಟು;

ಆ) ನಿಧನ ಹೊಂದಿರುವ ಪೌರಕಾರ್ಮಿಕರ ಅವಲಂಬಿತರು ಉದ್ಯೋಗ ಬಯಸಿ ಸಲ್ಲಿಸಿರುವ ಅರ್ಜಿಗಳ ಸಂಖ್ಯೆ ಎಷ್ಟು;

ಇ) ಇದುವರೆಗೂ ಅನುಕಂಪದ ಆಧಾರದ ಮೇಲೆ ನೀಡಿರುವ ಹುದ್ದೆಗಳೆಷ್ಟು? (ಹುದ್ದೆವಾರು ವಿವರ ನೀಡುವುದು);

ಶ್ರೀ ಎಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) :

ಅ) 238

ಆ) 230

ಇ) ದಿನಾಂಕ: 01–01–2000 ರಿಂದ 31–12–2003ರವರೆಗೆ ಸೇವೆಯಲ್ಲಿರುವಾಗಲೇ ಮರಣ ಹೊಂದಿದ ಪೌರಕಾರ್ಮಿಕರ ಅವಲಂಬಿತರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ನೀಡಿರುವ ಸಂಖ್ಯೆ: 160.

ಅನುಕಂಪದ ಆಧಾರದ ಮೇಲೆ ನೇಮಕಾತಿ ನೀಡಿರುವ ಹುದ್ದೆವಾರು ವಿವರ ಈ ಕೆಳಕಂಡಂತಿರುತ್ತದೆ.

1.	ಪ್ರಥಮ ದರ್ಜೆ ಗುಮಾಸ್ತರು	–	01
2.	ದ್ವಿತೀಯ ದರ್ಜೆ ಗುಮಾಸ್ತರು	–	10
3.	ಕಂದಾಯ ವಸೂಲಿಗಾರರು	–	05
4.	ಉಪ ನೋಂದಣಿಗಾರರು	–	03
5.	ಜವಾನರು	–	18
6.	ಪೌರಕಾರ್ಮಿಕರು	–	103
7.	ಗ್ಯಾಂಗ್‌ಮನ್	–	14